# ನೇಪಾಳ

## ಅಪೂರ್ವ ಭೂದೃಶ್ಯಗಳ ಶೃಂಗಮೇಳ

ಹಿಮಪರ್ವತಗಳನ್ನು ಹಾಸುಹೊದ್ದಿರುವ ನೇಪಾಳ, ಪರ್ವತಾರೋಹಿಗಳ ಸ್ವರ್ಗ. ಇಲ್ಲಿನ ಅಸಾಧಾರಣ ಭೂದೃಶ್ಯಗಳು, ಸರೋವರ, ಗಿರಿ ಕಣಿವೆಗಳ ನಡುವೆ ಪಯಣಿಸುವುದು ಒಂದು ರೋಚಕ ಅನುಭವ...

■ ಡಿ.ಎಸ್‌. ರಾಮಸ್ವಾಮಿ



ಹಿಮಪರ್ವತಗಳನ್ನು ಹೊತ್ತು ನಿಂತಿರುವ ನೇಪಾಳಕ್ಕೆ ಪ್ರವಾಸ ಹೋಗಬೇಕೆಂಬ ಬಹುದಿನಗಳ ಕನಸಿನ ಬೆನ್ನತ್ತಿ, ಎಲ್ಲಾ ತಯಾರಿ ಮಾಡಿಕೊಂಡು ಹೊರಟೇಬಿಟ್ಟೆವು. ಬೆಂಗಳೂರಿನಿಂದ ಗೋರಖಪುರ ತಲುಪಿ ಅಲ್ಲಿಂದ ಸುನೌಲಿ ಗಡಿ ಮೂಲಕ ನೇಪಾಳ ಪ್ರವೇಶಿಸುವುದು ಸುಲಭ ಮಾರ್ಗ. ಮತ್ತೊಂದು ದಾರಿಯೂ ಇದೆ. ಬಿಹಾರದ ಬಕ್ಸರ್ ಗಡಿ ಮೂಲಕ ತೆರಳುವುದು.

ಬೆಂಗಳೂರಿನಿಂದ ಬಕ್ಸರ್‌ಗೆ ನೇರ ಸಾರಿಗೆ ಲಭ್ಯ ಇಲ್ಲದ ಕಾರಣ ಪಾಟ್ನಾ ಮೂಲಕವೇ ತಲುಪಬೇಕು. ಹಾಗಾಗಿ ಗೋರಖಪುರ ಮಾರ್ಗ ಆರಿಸಿಕೊಂಡೆವು. ಕಠ್ಮಂಡುವಿಗೆ ನೇರ ವಿಮಾನ ಇರುವುದು ಹೌದಾದರೂ, ವೆಚ್ಚ ವಿಪರೀತ.

ಗೋರಖಪುರ ರೈಲ್ವೆ ನಿಲ್ದಾಣದ ಮುಂದೆ ನೇಪಾಳ ಪ್ರವಾಸ ಏರ್ಪಡಿಸುವ ಪ್ರವಾಸಿ ಸಂಸ್ಥೆಗಳು ಸಾಕಷ್ಟಿವೆ. ನಮ್ಮ ಅನುಕೂಲ, ಆರ್ಥಿಕ ಸಾಮರ್ಥ್ಯ ಮತ್ತು ಎಷ್ಟು ದಿನಗಳ ಪ್ರವಾಸ ಎಂದು ಸೂಚಿಸಿದರೆ ಈ ಸಂಸ್ಥೆಗಳು ವಾಹನ ಏರ್ಪಾಡು ಮಾಡುತ್ತವೆ ಮತ್ತು ನಮ್ಮ ಅಗತ್ಯಕ್ಕೆ ತಕ್ಕ ಹೋಟೆಲ್ಲುಗಳನ್ನೂ, ಊಟ ತಿಂಡಿಗಳ ಏರ್ಪಾಡನ್ನೂ ಮಾಡುತ್ತವೆ.

ಮುಕ್ತಿನಾಥನ ದರ್ಶನದ ಜೊತೆ ನೇಪಾಳದ ವಿವಿಧ ಸ್ಥಳಗಳಿಗಿರುವ ಹಲವು ಪ್ಯಾಕೇಜುಗಳು ಕಠ್ಮಂಡುವಿನಿಂದ ಇರುವುವಾದರೂ, ಬೆಂಗಳೂರಿನಿಂದ ಕಠ್ಮಂಡು ವಿಮಾನ ದರ ಸಾಮಾನ್ಯರ ಕೈಗೆಟಕುವಂತಿಲ್ಲ. ಹಾಗಾಗಿ ಹೆಚ್ಚು ನೆಚ್ಚಬಹುದಾದ ಪ್ಯಾಕೇಜುಗಳು ಗೋರಖಪುರ, ವಾರಾಣಸಿ, ಅಯೋಧ್ಯೆಗಳಿಂದ ಇವೆ. ನಾವೂ ಅಂಥದ್ದೊಂದು ಸಂಸ್ಥೆ ಸಂಪರ್ಕಿಸಿ ಹೊರಟೆವು.

ವಿಶ್ವದ ಅತಿ ಎತ್ತರದ ಹತ್ತು ಪರ್ವತಗಳ ಪೈಕಿ ಎಂಟನ್ನು ನೇಪಾಳವೇ ತನ್ನ ತೆಕ್ಕೆಯಲ್ಲಿಟ್ಟುಕೊಂಡಿದೆ. ಅಸಾಧಾರಣ ಚೆಲುವಿನ ಭೂದೃಶ್ಯಗಳನ್ನು, ಸರೋವರಗಳನ್ನು, ಗಿರಿಶಿಖರ, ಕಣಿವೆಗಳ ಸೊಬಗನ್ನೆಲ್ಲಾ ಬಾಚಿಕೊಂಡಂತೆ ಕಾಣುವ ನೇಪಾಳ ಪರ್ವತಾರೋಹಿಗಳ ಸ್ವರ್ಗ. ಇಂಥ ಚೆಲುವಿನ ನೇಪಾಳಕ್ಕೆ ಹೋಗುತ್ತಿದ್ದೇವೆ ಎಂಬುದೇ ನಮ್ಮಲ್ಲಿ ಉತ್ಸಾಹ ತುಂಬಿತ್ತು.

ಮೊದಲ ದಿನ ಗೋರಖನಾಥನ ದರ್ಶನದ ನಂತರ ನೇಪಾಳದ ಲುಂಬಿನಿಯ ಬುದ್ಧನ ದೇಗುಲಗಳನ್ನು ನೋಡಿದೆವು. ಸುನೌಲಿ ಗಡಿಯಿಂದ ಲುಂಬಿನಿ ತಲುಪಿದ್ದೆವು. ಲುಂಬಿನಿ ಬುದ್ಧನ ಜನ್ಮಸ್ಥಳವೂ ಆಗಿರುವುದರಿಂದ ಹಲವು ದೇಶಗಳು ಕಟ್ಟಿರುವ ವಿವಿಧ ಶೈಲಿಯ ಬುದ್ಧರನ್ನು ಕಾಣಿಸುವುದು ಎಲ್ಲ ಪ್ರವಾಸಿ ಸಂಸ್ಥೆಗಳ ಸಾಮಾನ್ಯ ಕಾರ್ಯಕ್ರಮ. ಅಂದೇ ರಾತ್ರಿ ಪೋಖರಾ ಮುಟ್ಟಬೇಕಿತ್ತು. ಮಾರ್ಗಮಧ್ಯದಲ್ಲೇ ಊಟಕ್ಕಾಗಿ ನಿಲ್ಲಿಸಿದಾಗ ಆ ಕಾಡುದಾರಿಯಲ್ಲಿ ಹೋಟೆಲ್ ನಡೆಸುತ್ತಿರುವ ಯುವದಂಪತಿ ನಮ್ಮನ್ನು ಸತ್ಕರಿಸಿದ್ದನ್ನು ಮರೆಯುವ ಹಾಗೇ ಇಲ್ಲ. ಥರಗುಟ್ಟಿಸುವ ಚಳಿಯಲ್ಲೂ ನಗುಮೊಗದ ಸ್ವಾಗತ ಕೋರಿ, ಬೆಣ್ಣೆ ಹಚ್ಚಿದ ಮೆತ್ತನೆಯ ರೊಟಿಗಳಿಗೆ ಆಲೂ ಫ್ರೈ ದಾಲ್, ಬಿಸಿ ಅನ್ನ ನೀಡಿದ ಅನ್ನಪೂರ್ಣೇಶ್ವರಿ ಆಕೆ.

ಮುಕ್ತಿನಾಥ ಕ್ಷೇತ್ರಕ್ಕೆ ಪೋಖರಾದಿಂದ ವಿಮಾನದಲ್ಲಿ ಹೋಗಬಹುದಾದರೂ ವೆಚ್ಚದ ದೃಷ್ಟಿಯಿಂದ ದುಬಾರಿ. ಜಾಂಸಮ್ಮಿನವರೆಗೆ ವಿಮಾನಯಾನ ಮಾಡಿದರೂ ಅಲ್ಲಿಂದ ಮತ್ತೆ ಜೀಪಿನಲ್ಲಿ 15 ಕಿ.ಮೀ. ಹೋಗಲೇಬೇಕು. ಹಾಗಾಗಿ ಪೋಖರಾದಿಂದ ಜೀಪಿನಲ್ಲಿ ಮುಕ್ತಿನಾಥ ದರ್ಶನ ಪ್ಯಾಕೇಜ್ ಉತ್ತಮ ಆಯ್ಕೆ.

ಪೋಖರಾದ ಹೋಟೆಲ್ ತಲುಪಿ ಮಲಗಿದಾಗ, ಮಧ್ಯರಾತ್ರಿ ಹನ್ನೆರಡು. ರೂಂ ಸೇರಿ ಗಡದ್ದು ನಿದ್ದೆ ತೆಗೆದು, ಬೆಳಗ್ಗೆ ಪೋಖರಾದ ವಿವಿಧ ಸ್ಥಳಗಳಿಗೆ ಭೇಟಿ ನೀಡಲು ಹೊರಟುನಿಂತೆವು. ಮೊದಲು, ಸಮೀಪದಲ್ಲಿದ್ದ ದೇವಿ ಫಾಲ್ಸ್‌ಗೆ ಭೇಟಿ ನೀಡಿದೆವು. ಜನರಿಂದ ಫಾಲ್ಸ್ ತುಂಬಿ ತುಳುಕುತ್ತಿತ್ತು. ಅಲ್ಲಿಯೇ ಇದ್ದ ಮನೋಕಾಮನ ಭಗವತಿಯ ಎದುರು, 'ಅಂದುಕೊಂಡದ್ದನ್ನು ಆಗಿಸು' ಎಂದು ದೇವಿಗೆ ಪ್ರಾರ್ಥನೆ ಸಲ್ಲಿಸುವ ಜನ!

ಇದೀಗ ಹಿಮಬೆಟ್ಟಗಳ ನಡುವೆ ಪಯಣಿಸುವ ಸುಸಮಯ ನಮ್ಮದಾಗಿತ್ತು. ಸುತ್ತಲೂ ಸ್ವರ್ಣಲೇಪಿತ ಬೆಟ್ಟಗಳು. ಎವರೆಸ್ಟ್ ದರ್ಶನಕ್ಕೆ ಹಾರುತ್ತಿರುವ ಲೋಹದ ಹಕ್ಕಿಗಳು, ಚಳಿಗೆ ಕಂಪಿಸುತ್ತಿರುವ ದೇಹದ

